**ಸಾಕ್ಷಿಯನ್ನು ದಿಃ 09.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ-**

ನಮ್ಮ ತಂದೆ ಮರುಹುಚ್ಚಯ್ಯನವರ ತಂದೆ ಹೆಸರು ಸಣ್ಣಯ್ಯ ಎಂದರೆ ಸರಿ. ಸಣ್ಣಯ್ಯನಿಗೆ 4 ಜನ ಮಕ್ಕಳು. ಜವರಯ್ಯ, ಮರುಹುಚ್ಚಯ್ಯ, ಪಾಪಯ್ಯ ಮತ್ತು ಸಾಕಮ್ಮ. ಈ ಕೇಸ್ ನ 2 ನೇ ಪ್ರತಿವಾದಿ ಮರಿ ಸಿದ್ದಮ್ಮ ಜವರಯ್ಯನ ಹೆಂಡತಿ ಎಂದರೆ ಸರಿ. ಈ ಕೇಸ್ ನಲ್ಲಿ 3 ರಿಂದ 5 ನೇ ಪ್ರತಿವಾದಿಯವರು ಅವರ ಮಕ್ಕಳು ಎಂದರೆ ಸರಿ. ನಮ್ಮ ತಂದೆ ಮರುಹುಚ್ಚಯ್ಯ ನವರಿಗೆ ಇಬ್ಬರು ಹೆಂಡತಿಯರು ಕೆಂಪಮ್ಮ ಮತ್ತು ಸಣ್ಣ ತಾಯಮ್ಮ ಎಂದರೆ ಸರಿ. ನಾವು ಮರುಹುಚ್ಚಯ್ಯನ ಮೊದಲನೆ ಹೆಂಡತಿ ಕೆಂಪಮ್ಮನ ಮಕ್ಕಳು ಎಂದರೆ ಸರಿ. 2 ನೇ ಹೆಂಡತಿ ಸಣ್ಣ ತಾಯಮ್ಮ ಮಕ್ಕಳು ಶಿವಮ್ಮ ಮತ್ತು ನಂಜುಂಡ ಎಂದರೆ ಸರಿ.

ದಾವಾ ಐಟಂ ನಂ. 3 ಸರ್ವೆ ನಂ. 163 3 ಎಕರೆ 16 ಗುಂಟೆ ಜಮೀನು ಪೂರ್ವಕ್ಕೆ ಕಾಲುವೆ, ಪಶ್ಚಿಮಕ್ಕೆ ಸಿದ್ದಯ್ಯನ ಜಮೀನು, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಜವಯ್ಯನ ಹೆಸರಿಗೆ ಗ್ರ್ಯಾಂಟ್ ಆದ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಜವರಯ್ಯನ ಕುಟುಂಬದವರೆ ವಾಸ ಇದ್ದಾರೆ ಎಂದರೆ ಸರಿ. ಗ್ರ್ಯಾಂಟ್ ಆದ ಮೇಲೆ ಆರ್.ಟಿ.ಸಿ ಗಳ ದಾಖಲೆಗಳು ಜವರಯ್ಯನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಜವರಯ್ಯನವರು ತೀರಿಕೊಂಡ ನಂತರ ಸದರಿ ಸ್ವತ್ತಿನ ಖಾತೆ ಅವರ ಕುಟುಂಬದವರ ಹೆಸರಿಗೆ ಪೌತಿ ಖಾತೆ ಆಗಿದೆ ಎಂದರೆ ಸರಿ. ಸದರಿ ದಾವಾ ಐಟಂ ನಂ. 3 ಹಳೆ ಸರ್ವೆ ನಂ. 163/51 ಆಗಿತ್ತು ಎಂದರೆ ಸರಿ. ಸದರಿ ವಿಸ್ತೀರ್ಣ 3 ಎಕರೆ 9 ಗುಂಟೆ ಎಂದರೆ ಸರಿ. ಸದರಿ ಸ್ವತ್ತಿನ ವಿಸ್ತೀರ್ಣ 3 ಎಕರೆ 9 ಗುಂಟೆ ಇದ್ದರೂ ತಪ್ಪಾಗಿ 3 ಎಕರೆ 16 ಗುಂಟೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ರ ಸ್ವತ್ತು ಪಿತ್ರಾರ್ಜಿತ ಅಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ರ ಸ್ವತ್ತು ಪಿತ್ರಾರ್ಜಿತ ಅಸ್ತಿ ಅಲ್ಲ 2 ರಿಂದ 5 ನೇ ಪ್ರತಿವಾದಿಯರ ತಂದೆ ಜವರಯ್ಯನವರ ಸ್ವಯಾರ್ಜಿತ ಅಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿಗಳಿಗಾಗಲಿ, ನಮಗಾಗಲಿ, 1, 6 ಮತ್ತು 7 ನೇ ಪ್ರತಿವಾದಿಯರಿಗಾಗಲಿ ದಾವಾ ಐಟಂ ನಂ. 3 ರ ಆಸ್ತಿಯಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪ ಪಾಪಯ್ಯ 1 ನೇ ಪ್ರತಿವಾದಿ ಇರುತ್ತಾರೆ ಅವರಿಗೆ ಎಲ್ಲಾ ವಿಷಯ ಗೊತ್ತಿರುತ್ತದೆ ನನಗೆ ಅಷ್ಟಾಗಿ ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಐಟಂ ನಂ. 1, 2 ಮತ್ತು 4 ರ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳೆಲ್ಲರೂ ಒಟ್ಟು ಸ್ವಾಧೀನದಲ್ಲಿ ಇದ್ದು ಅನುಬೋಗದಲ್ಲಿ ಇದ್ದೇವೆ ಎಂದರೆ ಸರಿ. ದಾವಾ ಐಟಂ ನಂ. 1, 2 ಮತ್ತು 4 ವಾದಿ ಮತ್ತು ಪ್ರತಿವಾದಿಗಳೆಲ್ಲರಿಗೂ ಭಾಗದತ ಇದೆ ಎಂದರೆ ಸರಿ. ಸರ್ವೆ ನಂ. 163/42 3 ಎಕರೆ 36 ಗುಂಟೆ ಜಮೀನು ಸಹ ಪಿತ್ರಾರ್ಜಿತ ಅಸ್ತಿ ಎಂದರೆ ಸರಿ. ಸದರಿ ಸರ್ವೆ ನಂ. ಗಳಲ್ಲಿ 7 ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 163/42 ತಂದೆಯ ತಾಯಿ ಸಣ್ಣಮ್ಮ ಅಲಿಯಾಸ್ ಸಿದ್ದಮ್ಮ ರವರಿಗೆ ಮಂಜೂರಾದ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಣ್ಣಮ್ಮ ಅಲಿಯಾಸ್ ಸಿದ್ದಮ್ಮ ರವರು ಈಗ ತೀರಿಕೊಂಡಿದ್ದಾರೆ ಎಂದರೆ ಸರಿ. ಸರ್ವೆ ನಂ. 163/42 ಜಮೀನನಲ್ಲಿ ಜವರಯ್ಯನವರ ವಾರಸುದಾರರಿಗೂ ಭಾಗಾಂಶ ಇದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ರಲ್ಲಿ 2 ರಿಂದ 5 ನೇ ಪ್ರತಿವಾದಿಗಳಿಗೆ ಮಾತ್ರ ಹಕ್ಕು ಇದ್ದು ಅದರಲ್ಲಿ ವಾದಿಗಳಿಗಾಗಲಿ ಇನ್ನುಳಿದ ಪ್ರತಿವಾದಿಗಳಿಗಾಗಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿ.ಸಾಕ್ಷಿ ಪುನಃ ಮನೆಯ ಜಾಗವನ್ನು ಬಿಟ್ಟಕೊಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 1 ರಲ್ಲಿ 3 ವಾಸದ ಮನೆಗಳು ಇದ್ದು, ಅದರಲ್ಲಿ ಕೂಡ 2 ರಿಂದ 5 ನೇ ಪ್ರತಿವಾದಿಗಳಿಗೆ ಹಕ್ಕು ಇದೆ ಎಂದರೆ ಅವರಿಗೆ ಹೇಗೆ ಹಕ್ಕು ಇದೆ ಎಂದು ನುಡಿಯುತ್ತಾರೆ.

**1, 6 ಮತ್ತು 7 ನೇ ಪ್ರತಿವಾದಿಗಳು ಏಕಪಕ್ಷೀಯಃ**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.